ನವ್ತಾಮರದ ಬಂಗ್ಲಾ (ಬನವಕಲ್ಯಾಣ) ವರಿಶಿಷ್ಟ ಜಾತಿ ವಸತಿ ಶಾಲೆಗೆ ನಿವೇಶನ ಲಭ್ಯವಾದ ನಂತರ ಶಾಲಾ ನಂಕೀರ್ಣ ನಿರ್ಮಾಣ ಮಾಡಲಾಗುವುದು

ಕುಡಿಯುವ ನೀರಿನ ಮತ್ತು ವಿದ್ಯುತ್ ಸಂಪರ್ಕ ವ್ಯವಸ್ಥೆ ಕಲ್ಪಿಸಲು ಅನುದಾನದ ಕೊರತೆಯಿರುವುದರಿಂದ ಪ್ರಸಕ್ತ ಸಾಲಿನಲ್ಲಿ ಜಿಲ್ಲಾವಲಯದಲ್ಲಿನ ಅನುದಾನದಲ್ಲಿ ಕ್ರಮ ಕೈಗೊಳ್ಳಲಾಗುವುದು

ಉ) ವಸತಿ ಶಾಲೆಗಳಿಗೆ ಪ್ರಸಕ್ತ ಸಾಲಿಗೆ ನಿಗದಿವಡಿಸಿದ ಬಿಡುಗಡೆ ಹಾಗೂ ಖರ್ಚಿನ ಅನುದಾನದ ವಿವರ ಕೆಳಕಂಡಂತಿದೆ

ವಸತಿ ಶಾಲೆಯ ಹೆಸರು	ನಿಗದಿ ವಡಿಸಿದ ಅನುದಾನ	ಬಿಡುಗಡೆ	ಖರ್ಚು
ಬೆಟ್ಟಬಾಲಕುಂದ (ಬನವಕಲ್ಯಾಣ)	48 48	36 36	24 12
ನವ್ತಾಮರ ಬಂಗ್ಲಾ (ಬನವಕಲ್ಯಾಣ)	25 00	17 00	4 25

ಆಶ್ರಮ ಶಾಲೆಗೆ ಈ ಕಳಕಂಡಂತೆ ಅನುದಾನ ಬಿಡುಗಡೆ ಆಗಿ ಖರ್ಚಾಗಿರುತ್ತದೆ

ವರ್ಷ	ಬಿಡುಗಡೆಯಾದ ಅನುದಾನ	ಖರ್ಚಾದ ಅನುದಾನ	ಉಳಿಕೆ
2001–02	0 88	0 88	--
2002–03	5 98	2 90	3 08
2003–04	2 45	2 45	--
2004–05	3 50	3 26	0 24
2005–06	2 91	2 90	0 01
2006–07 ಡಿಸೆಂಬರ್ ಅಂತ್ಯಕ್ಕೆ	1 57	1 57	--

ಊ) ಬೇಡಿಕೆ ಮತ್ತು ಆಯವ್ಯಯದಲ್ಲಿನ ಅನುದಾನದ ಲಭ್ಯತೆ ಅನುಸರಿಸಿ ನಿರ್ಧರಿಸಲಾಗುವುದು

86 (174) ಶ್ರೀ ಮಲ್ಲಿಕಾರ್ಜುನ್ ಸಿದ್ರಾಮಪ್ಪ ಖೂಬಾ (ಬನವಕಲ್ಯಾಣ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬಸವ ಕಲ್ಯಾಣ ಮತಕ್ಷೇತ್ರದಲ್ಲಿ ಇರುವ ಸಮಾಜ ಕಲ್ಯಾಣ ಇಲಾಖೆಗೆ ಸೇರಿದ ವಿವಿಧ ವರ್ಗಗಳ ವಿದ್ಯಾರ್ಥಿ ವಸತಿ ನಿಲಯಗಳಾವುವು ,

ಆ) ಇವುಗಳ ನಿರ್ವಹಣೆ ಹಾಗೂ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗಾಗಿ ಪ್ರಸಕ್ತ ಸಾಲಿನಲ್ಲಿ ನಿಗದಿಪಡಿಸಲಾದ ಹಣವೆಷ್ಟು, ಬಿಡುಗಡೆಯಾದ ಹಾಗೂ ಇಲ್ಲಿಯವರೆಗೆ ಖರ್ಚಾದ ಹಣ ಎಷ್ಟು ,

ಇ) ಸದರಿ ಮತಕ್ಷೇತ್ರದಲ್ಲಿ ಇಲಾಖೆಯ ವತಿಯಿಂದ ನಡೆಸಲಾಗುತ್ತಿರುವ ವಿದ್ಯಾರ್ಥಿ ವಸತಿ ನಿಲಯಗಳಲ್ಲಿ ತೀವ್ರವಾದ ಮೂಲಭೂತ ಸೌಕರ್ಯಗಳ ಕೊರತೆ ಇರುವುದು ನಿಜವಲ್ಲವೇ ,

ಈ) ಮೇಲ್ಕಂಡ ಕ್ಷೇತ್ರದಲ್ಲಿ ಯಾವ ಯಾವ ವರ್ಗಗಳ ವಿದ್ಯಾರ್ಥಿ ವಸತಿ ನಿಲಯಗಳನ್ನು ಪ್ರಸಕ್ತ ಸಾಲಿನಲ್ಲಿ ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆ ,

ಉ) ಹಾಗಿದ್ದಲ್ಲಿ ಇದನ್ನು ನೀಗಿಸಲು ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಬಾಲಚಂದರ ಲ ಜಾರಕಿಹೊಳಿ (ಸಮಾಜ ಕಲ್ಯಾಣ ಸಚಿವರು)

ಅ) ಬನವ ಕಲ್ಯಾಣ ಮತಕ್ಷೇತ್ರದಲ್ಲಿ ಸಮಾಜ ಕಲ್ಯಾಣ ಇಲಾಖೆಗೆ ಸೇರಿದ ವರಿಶಿಷ್ಟ ಜಾತಿಯ ವಿದ್ಯಾರ್ಥಿ ನಿಲಯಗಳ ವಿವರಗಳು ಇಂತಿವೆ

ಮೆಟ್ರಿಕ್ ನಂತರ			ಮೆಟ್ರಿಕ್ ಪೂರ್ವ		
ಬಾಲಕರು	ಬಾಲಕಿಯರು	ಒಟ್ಟು	ಬಾಲಕರು	ಬಾಲಕಿಯರು	ಒಟ್ಟು
1	1	2	2	8	10

ಆ) ಸದರಿ ವಿದ್ಯಾರ್ಥಿನಿಲಯಗಳ ನಿರ್ವಹಣೆ ಹಾಗೂ ಮೂಲಭೂತ ಸೌಕರ್ಯಕ್ಕಾಗಿ ಪ್ರಸಕ್ತ ಸಾಲಿನಲ್ಲಿ ನಿಗಧಿಪಡಿಸಿದ, ಬಿಡುಗಡೆಯಾದ ಹಾಗೂ ಇಲ್ಲಿಯವರೆಗೆ ಖರ್ಚಾದ ಹಣದ ವಿವರ ಈ ಕೆಳಗಿನಂತಿದೆ

ನಿಗದಿಪಡಿಸಿದ ಅನುದಾನ	ಬಿಡುಗಡೆಯಾದ ಅನುದಾನ	ಖರ್ಚಾದ ಅನುದಾನ	ನಿಗದಿಪಡಿಸಿದ ಅನುದಾನ	ಬಿಡುಗಡೆಯಾದ ಅನುದಾನ	ಖರ್ಚಾದ ಅನುದಾನ
8 99	6 81	3 15	60 84	45 63	4 31

ಇ) ಹೌದು

ಈ) ಹೌದು, ಸದರಿ ಮತಕ್ಷೇತ್ರದಲ್ಲಿ ಪ್ರಸಕ್ತ ಸಾಲಿನಲ್ಲಿ ಬನವ ಕಲ್ಯಾಣ ತಾಲ್ಲುಕು ಬೆಟಗೇರಿ ಗ್ರಾಮದಲ್ಲಿ ಒಂದು ವರಿಶಿಷ್ಟ ಜಾತಿ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯವನ್ನು 2006–07ನೇ ಸಾಲಿನಲ್ಲಿ ಪ್ರಾರಂಭಿಸಲಾಗಿದೆ

ಉ) ಆಯವ್ಯಯದಲ್ಲಿ ಒದಗಿಸಿದ ಅನುದಾನದ ಲಭ್ಯತೆ, ಬೇಡಿಕೆ ಮತ್ತು ಅವಶ್ಯಕತೆಗಳನ್ನು ಅನುಸರಿಸಿ ಇದನ್ನು ನೀಗಿಸಲು ಕ್ರಮ ಕೈಗೊಳ್ಳಲಾಗುವುದು

87 (175) ಶ್ರೀ ಮಲ್ಲಿಕಾರ್ಜುನ್ ಸಿದ್ರಾಮಪ್ಪ ಖೂಬಾ (ಬಸವಕಲ್ಯಾಣ) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕಳೆದ ವರ್ಷ ಮಂಡಿಸಿದ ಆಯವ್ಯಯದಲ್ಲಿ (2006 ರಲ್ಲಿ) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ಯಾವ ಯಾವ ಹೊಸ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುವ ಬಗ್ಗೆ ಪ್ರಸ್ತಾಪಿಸಲಾಗಿತ್ತು ,